## ದಿನಾಂಕ: 07.04.2011 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಸಭಾಂಗಣದಲ್ಲಿ ಜೆಎನ್‌ನರ್ಮ್ ಯೋಜನೆಯ ಕಾಮಗಾರಿ ಸಮಿತಿಯ ಪ್ರಗತಿಪರ ಶೀಲನ ಸಭೆ ನಡವಳಿಗಳು

ಸಭೆ ದಿನಾಂಕ : 07.04.2011
ಸಭೆ ಸಮಯ : ಬೆಳಗ್ಗೆ 12.00 ಘಂಟೆ
ಸಭೆಯ ಅಧ್ಯಕ್ಷತೆ : ಶ್ರೀ. ಹರ್ಷಗುಪ್ತ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಹಾಗೂ ವಿಶೇಷಾಧಿಕಾರಿಗಳು (ಜೆಎನ್‌ನರ್ಮ್)

| Sl. No. | ಹಾಜರಿದ್ದ ಸದಸ್ಯರು | Sl. No. | Other Officers Present |
|---|---|---|---|
| 1. | ಶ್ರೀ. ಕೆ.ಎಸ್. ರಾಯ್ಕರ್ , ಆಯುಕ್ತರು, ಮೈನಪಾ, ಮೈಸೂರು. | 8. | ಶ್ರೀ. ಬಿ.ಕೆ. ಚಾಮರಾಜೇಗೌಡ, ಕಾರ್ಯಪಾಲಕ ಅಭಿಯಂತರು, ಮೈನಪಾ, ಮೈಸೂರು. |
| 2. | ಶ್ರೀ. ಶ್ರೀವಾತ್ಸವ್, ಮ್ಯಾನೇಜಿಂಗ್ ಡೈರೆಕ್ಟರ್, ಕೆಯುಐಡಿಎಫ್‌ಸಿ, ಬೆಂಗಳೂರು. | 9. | ಶ್ರೀ. ಬಿ.ಸಿ. ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಎಸ್‌ಆರ್‌ಟಿಸಿ, ಮೈಸೂರು. |
| 3. | ಶ್ರೀ. ಸಂದೇಶ್, ಪೂಜ್ಯ ಮಹಾಪೌರರು | 10. | ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆಎನ್‌ನರ್ಮ್ ಮೈನಪಾ, ಮೈಸೂರು |
| 4. | ಶ್ರೀ. ಪಿ.ಎಸ್. ಜಯಣ್ಣ, ಆಯುಕ್ತರು, ಮೈನಪ್ರಾ, ಮೈಸೂರು. | 11. | ಶ್ರೀ ಶ್ರೀನಿವಾಸ, ವಲಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ, ಮೈಸೂರು. |
| 5. | ಶ್ರೀ. ಬಿ.ಕೆ. ಸುರೇಶ್ ಬಾಬು, ಅಧೀಕ್ಷಕ ಇಂಜಿನಿಯರ್, ಮೈನಪಾ, ಮೈಸೂರು. | | |
| 6. | ಶ್ರೀ. ಶಿವಕುಮಾರ್, ಅಧೀಕ್ಷಕ ಇಂಜಿನಿಯರ್, ಮೈನಪ್ರಾ, ಮೈಸೂರು. | | |
| 7. | ಶ್ರೀ ಸುಬ್ಬೇಗೌಡ ಎಸ್, ಕಾರ್ಯಪಾಲಕ ಅಭಿಯಂತರು, ಕೆಯುಡಬ್ಲ್ಯೂಎಸ್&ಡಿಬಿ, ಮೈಸೂರು | | |

ಪ್ರಾರಂಭದಲ್ಲಿ ಶ್ರೀ. ಶ್ರೀವಾತ್ಸವ್, ಮ್ಯಾನೇಜಿಂಗ್ ಡೈರೆಕ್ಟರ್, ಕೆಯುಐಡಿಎಫ್‌ಸಿ ಇವರು ಮಾನ್ಯ ಅಧ್ಯಕ್ಷರನ್ನು ಹಾಗೂ ಸಮಿತಿಯ ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

I **<u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಮಗಾರಿ</u>** :

ಮೈಸೂರು ನಗರದ 65 ವಾರ್ಡ್‌ಗಳಿಗೆ 70 ಡಿಎಂಎಗಳನ್ನು ಮಾಡಲಾಗಿದ್ದು, 24x7 ಯನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್&ಡಿಬಿ, ರವರು ವಿವರಿಸಿದರು. ಮೊದಲನೇ ಪ್ಯಾಕೇಜ್ ನಲ್ಲಿ 26 ಟ್ಯಾಂಕ್ ಮತ್ತು 25 ಓವರ್ ಟ್ಯಾಂಕ್ ಮುಖಾಂತರ ನೀರನ್ನು ಒದಗಿಸುತ್ತಿದ್ದೇವೆ. ನಾಗಾರ್ಜುನ ಮತ್ತು ದೇವನೂರ್ ವಲಯದಲ್ಲಿ ಕೆಲಸವು ಪೂರ್ಣಗೊಂಡಿದೆ. ದತ್ತ ನಗರದ ಮದ್ಯ ವಲಯದಲ್ಲಿ ಮಾರ್ಚ್ ಕೊನೆಯಲ್ಲಿ 2 ಓವರ್ ಟ್ಯಾಂಕ್ ಅನ್ನು ಅಳವಡಿಸಿದ್ದೇವೆ. ಶಾರದ ದೇವಿ ನಗರ ಮತ್ತು ಸರಸ್ವತಿ ಪುರಂನಲ್ಲಿ 2 ಕಮೀಷನ್ ಮಾಡಿದ್ದೇವೆ. ಇದರಿಂದ ಹೆಬ್ಬಾಳದಲ್ಲಿ ತೊಂದರೆ ಉಂಟಾಗಿರುವುದರಿಂದ ನೀರಿನ ವ್ಯವಸ್ಥೆಯನ್ನು ನೀಡಿದ್ದೇವೆ ಎಂದು ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಜೆಪಿ ನಗರದ ವಾರ್ಡ್ ಸಂಖ್ಯೆ 11, 12 ಮತ್ತು 13 ರಲ್ಲಿ ಇನ್ನು 3 ಅಥವ 4 ದಿನಗಳಲ್ಲಿ ನೀರಿನ ಪೂರೈಕೆ ಪೂರ್ಣಗೊಳ್ಳುವುದು ಎಂದು

ತಿಳಿಸಿದರು. ಈಗ ನಾವು ವೆಬ್ ಬೆಸ್ ಕಮಿಷನ್ ಅನ್ನು ಅನ್ ಲೈನ್ ಮುಖಾಂತರ ಅಳವಡಿಸಿದ್ದೇವೆ. ಇದರಿಂದ ಯಾವ ಮಟ್ಟದಲ್ಲಿ ಏನಾಗುತ್ತಿದೆ ಎಂದು 15 ನಿಮಿಷದೊಳಗೆ ತಿಳಿಯಬಹುದು ಹಾಗೆಯೆ ಈ ವೆಬ್ ಸೈಟ್ ಅನ್ನು ಸಾರ್ವಜನಿಕರು ಸಹ ಉಪಯೋಗಿಸಬಹುದು ಹಾಗೂ ಇದರ ಎಲ್ಲಾ ವ್ಯವಸ್ಥೆಯನ್ನು ವಾಣಿವಿಲಾಸನ ಸರ್ವಿಸ್ ಸ್ಟೇಷನ್ ಅಧಿಕಾರಿಗಳೇ ಅದರ ನಿರ್ವಹಣೆ ನೋಡಿಕೊಳ್ಳುತ್ತಿದ್ದಾರೆ ಎಂದು ಸಭೆಯಲ್ಲಿ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಇದರ ಅನುಕೂಲವೇನೆಂದರೆ ಇದರಿಂದ ನ್ಯೂನತೆಯನ್ನು ತಿಳಿದು ಅದನ್ನು ಬಹುಬೇಗ ಸರಿಪಡಿಸಬಹುದು ಎಂದು ತಿಳಿಸಿದರು. ಪೂರ್ವ ಮತ್ತು ಪಶ್ಚಿಮ ವಲಯದಲ್ಲಿ ಡಿಎಂಎ ಕೆಲಸವು ನಡೆಯುತ್ತಿದೆ ಹಾಗೂ ಪಶ್ಚಿಮ ವಲಯದ ಸರಸ್ವತಿಪುರಂನಲ್ಲಿ ನಡೆಯುತ್ತಿರುವ ಡಿಎಂಎ ಕೆಲಸವು ಜನವರಿ 2012 ರೊಳಗೆ ಪೂರ್ಣಗೊಳ್ಳುವುದು ಹಾಗೂ ಹಣದ ಅಭಾವ ಇದೆ ಎಂದು ತಿಳಿಸಿದರು. ಮೈಸೂರು ಮಹಾನಗರ ಪಾಲಿಕೆಯ ಪಾಲಿನ ಅಡಿಯಲ್ಲಿ ಎಲ್ಲಾ ಪ್ರಾಜೆಕ್ಟ್‌ಗಳು ನಡೆಯುತ್ತಿದೆ ಎಂದು ತಿಳಿಸಿದರು.

ಮೈಸೂರು ನಗರದ ಮೇಯರ್ ರವರು ಮಾತನಾಡುತ್ತಾ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು ತಿಳಿಸಿದ ಯಾವುದೂ ಕೆಲಸವು ನಡೆಯುತ್ತಿಲ್ಲ. 100 ವರ್ಷದಿಂದಲೂ ಪೈಪ್ ಲೈನ್‌ಗಳು ಹೊಡೆದುಹೋಗಿದೆ ಅದನ್ನು ಸರಿಪಡಿಸಿಲ್ಲ ಹಾಗೂ 24x7 ಪೈಪ್ ಲೈನ್ ಮೈಸೂರು ನಗರದಲ್ಲೆಲ್ಲಾ ಪೂರ್ಣಗೊಳಿಸಿಲ್ಲ ಎಂದು ದೂರಿದರು. ಆದ್ದರಿಂದ 24/7 ನಿರಂತರ ನೀರು ಸರಬರಾಜು ಯೋಜನೆಯು ಉಪಯೋಗವಿಲ್ಲ ಎಂದು ತಿಳಿಸಿದರು.

ಇದಕ್ಕೆ ಉತ್ತರವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು 24/7 ನಿರಂತರ ನೀರು ಸರಬರಾಜು ಯೋಜನೆಯು ಇನ್ನು ಪೂರ್ಣಗೊಂಡಿಲ್ಲದ ಕಾರಣ ಮೈಸೂರಿನ ಜನತೆಗೆ ದಿನಕ್ಕೆ ಕೆಲವು ಗಂಟೆಗಳ ಕಾಲ ನೀರನ್ನು ಸರಬರಾಜು ಮಾಡುತ್ತಿದ್ದೇವೆ ಹಾಗೂ ಬೇಸಿಗೆ ಕಾಲದ ಕಾರಣ ನೀರಿನ ಅಭಾವವನ್ನು ತಡೆಗಟ್ಟಲು ದಿನಕ್ಕೆ ಬೆಳಗಿನ ಸಮಯದಲ್ಲಿ 4 ಅಥವ 5 ಗಂಟೆಗಳ ಕಾಲ ಮೈಸೂರಿಗೆ ನೀರಿನ ಪೂರೈಕೆ ಆಗುವಂತೆ ಕೆಲಸ ನಿರ್ವಹಿಸುತ್ತಿದ್ದೇವೆ ಎಂದು ತಿಳಿಸಿದರು.

ಮೈಸೂರು ನಗರದ ಮೇಯರ್ ರವರು ಮಾತನಾಡುತ್ತಾ ಕೆಲವು ವಾರ್ಡ್ ಕನನೀಸ ಮತ್ತು ಒಳಚರಂಡಿ ಮಂಡಳಿಯವರು ಕೆಲವು ವಾರ್ಡ್‌ನವರಿಗೆ ದಿನಪೂರ್ತಿ ಮತ್ತು ಕೆಲವು ವಾರ್ಡ್‌ನವರಿಗೆ ಕೆಲ ಗಂಟೆಗಳ ಕಾಲ ಮಾತ್ರ ನೀರನ್ನು ಒದಗಿಸುತ್ತಿದ್ದಾರೆ ಹಾಗೂ ಮೆ. ಜಸ್ಕೊ ರವರ ಜೊತೆ ವಾಟರ್ ಬೋರ್ಡ್ ರವರಿಗೆ ಹೊಂದಾಣಿಕೆ ಆಗಿಲ್ಲ ಎಂದು ತಿಳಿಸಿದರು. 2006–07 ನಲ್ಲಿ ಈ ಪ್ರಾಜೆಕ್ಟ್‌ಗಳು ಪ್ರಾರಂಭಿಸಲಾಯಿತು. ಆದರೆ ಯಾವ ಇಲಾಖೆಯಲ್ಲೂ ಯಾವ ಬದಲಾವಣೆಯು ಕಾಣುತ್ತಿಲ್ಲ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಈ ವಿಷಯದ ಬಗ್ಗೆ ಯಾವ ಸಭೆಯನ್ನು ಸಹ ಏರ್ಪಡಿಸಿರುವುದಿಲ್ಲ ಹಾಗೂ ಮೈನಪಾ ಯಾವ ರೋಲ್ ನಿರ್ವಹಿಸುತ್ತಿದೆ ಎಂದು ತಿಳಿಯುತ್ತಿಲ್ಲ ಎಂದು ದೂರಿದರು.

ಇದಕ್ಕೆ ಉತ್ತರವಾಗಿ ಕನನೀಸ ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು ನಮ್ಮ ಟೆಕ್ನಿಕಲ್ ತಂಡದವರು ನೀರಿನ ಕೊರತೆಯಿರುವ ಪ್ರದೇಶದಲ್ಲಿ ಅದನ್ನು ಗುರುತಿಸಿ ಸರಿಪಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ ಹಾಗೂ ಮೆ. ಜಸ್ಕೊರವರ ಜೊತೆ ಸಭೆಯನ್ನು ನಡೆಸಿ ನ್ಯೂನತೆ ಕಂಡುಬಂದಲ್ಲಿ ಅದನ್ನು ಸರಿಪಡಿಸಲು ನಿರ್ದೇಶನವನ್ನು ನೀಡಿದ್ದೇವೆ ಎಂದು ತಿಳಿಸಿದರು. ಹಾಗೆಯೇ ಬೋರ್‌ವೆಲ್ ಸರಿಪಡಿಸುವ ಮತ್ತು ರಿಪ್ಲೆಸ್‌ಮೆಂಟ್ ಕೆಲಸವನ್ನು ಹಾಗೂ ಅದನ್ನು ಅಭಿವೃದ್ಧಿ ಪಡಿಸಲು ಸಹ ಮೆ. ಜಸ್ಕೊರವರಿಗೆ ತಿಳಿಸಿದ್ದೇವೆ ಎಂದು ತಿಳಿಸಿದರು. ಮೆ. ಜಸ್ಕೊರವರಿಗೆ ನೀಡಿರುವ ಅವಧಿಯೊಳಗೆ ಕೆಲಸ ಪೂರ್ಣಗೊಳಿಸದಿದ್ದರೆ ಅವರಿಗೆ ನಾವು ದಂಡವನ್ನು ಸಹ ವಿಧಿಸುತ್ತಿದ್ದೇವೆ ಎಂದರು. ಮುಂದಿನ ದಿನಗಳಲ್ಲಿ ದೂರುಗಳು ಬಂದ ತಕ್ಷಣವೇ ಅದನ್ನು ನಿವಾರಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ತಿಳಿಸಿದರು. ಡ್ಯಾಂ ಗೆ ಮಳೆನೀರು ಬಂದು ಶೇಖರವಾಗುವುದನ್ನು ತಡೆಯಲು ಕಾಫಲ್ ಅನ್ನು ಅಳವಡಿಸಿದ್ದೇವೆ ಹಾಗೂ ಆರ್‌ಎಂಸಿ ಪ್ಲಾಂಟ್ ಮಾಡಿದ್ದೇವೆ, 40 ದಿನಗಳಿಂದ ಕೆಲಸವನ್ನು ಜೆಲ್ಲಿ ಮತ್ತು ಮರಳು ಇಲ್ಲದಿರುವ ಕಾರಣದಿಂದ ನಿಲ್ಲಿಸಿದ್ದೇವೆ ಎಂದು ತಿಳಿಸಿದರು. ಡಬ್ಲ್ಯೂಟಿಪಿ ಕೆಲಸ ಮುಗಿದಿದೆ. ಮೂಡಾ ರವರ ರಿಂಗ್ ರೋಡ್ ಕೆಲಸ ಮುಗಿದ ನಂತರ ನಾವು ಕೆಲಸವನ್ನು ಪೂರ್ಣಗೊಳಿಸುತ್ತೇವೆ. ಆರ್ ಟಿ ನಗರ, ಜೆಪಿ ನಗರದಲ್ಲಿ ಎಂಬಿಆರ್ ರೂಫ್ ಪೂರ್ಣಗೊಂಡಿದೆ. ಪ್ಲಾಸ್ಟರ್ ಕೆಲಸ ನಡೆಯುತ್ತಿದೆ. ಭೂಸ್ವಾಧೀನದಲ್ಲಿ ಹಾಗೂ ಹಣದ ತೊಂದರೆಯುಂಟಾಗುತ್ತಿದೆ. 21 ಕೋಟಿಗಳಷ್ಟು ಸರ್ಕಾರ ನೀಡಿದೆ ಆದರೆ 60 ಕೋಟಿಗಳಷ್ಟು ವೆಚ್ಚವಾಗಿದೆ ಹಾಗೂ ಸರ್ಕಾರದಿಂದ ಹಾಕಿರುವ ಫಿಲ್ಟರ್ ತುಂಬಾ ಹಳೆಯದಾಗಿದೆ ಎಂದು ತಿಳಿಸಿದರು. ಕಬಿನಿ ನೀರು ಸರಬರಾಜು ಯೋಜನೆ ಕಾಮಗಾರಿಗೆ ಸಂಬಂಧಿಸಿದಂತೆ ಭೂಸ್ವಾಧೀನದ ಪರಿಹಾರ ಮೊತ್ತವನ್ನು ಇನ್ನೂ ನೀಡಬೇಕಾಗಿದ್ದು, ಭೂಮಾಲೀಕರು ತ್ವರಿತವಾಗಿ ಪರಿಹಾರ ಧನವನ್ನು ನೀಡುವಂತೆ ಒತ್ತಾಯಿಸುತ್ತಿದ್ದರೆಂದು ಮತ್ತು ಕಾಮಗಾರಿ ನಿರ್ವಹಿಸಲು ಅಡಚಣೆ ಮಾಡುತ್ತಿದ್ದಾರೆಂದು ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.

## II ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿಗಳು :-

5 ಬಸ್ಸ್ ನಿಲ್ದಾಣಗಳ ಪೈಕಿ ಅಂದರೆ ಕುವೆಂಪುನಗರ, ಸಾತಗಳ್ಳಿ, ಇಲವಾಲದಲ್ಲಿ ಬಸ್ಸ್ ನಿಲ್ದಾಣ ಕಾಮಗಾರಿಗಳ ಕೆಲಸವು ಮೇ ಮಾಹೆಯಲ್ಲಿ ಪೂರ್ಣಗೊಳ್ಳಲಿದೆ ಹಾಗೂ ಚಾಮುಂಡಿ ಬೆಟ್ಟದ ಕಾಮಗಾರಿಯು ಜೂನ್ ತಿಂಗಳಲ್ಲಿ ಪೂರ್ಣಗೊಳ್ಳುವುದು ಮತ್ತು ಜೆಎನ್‌ನರ್ಮ್‌ನಿಂದ 150 ಬಸ್ಸುಗಳು ಚಾಲನೆಯಲ್ಲಿದೆ ಎಂದು ತಿಳಿಸಿದರು. ವಿಶ್ವ ಬ್ಯಾಂಕ್ ನ ಜೊತೆ 31 ನೇ ಏಪ್ರಿಲ್ ರಂದು ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದೇವೆ. 121 ಶೆಲ್ಟರ್ ನಲ್ಲಿ ವಾಹನ ಪಾರ್ಕಿಂಗ್, ಮಲ್ಟಿಸ್ಟೋರ್ ಸೆಲ್ಲರ್, ಕ್ಯಾಂಟಿನ್ ವ್ಯವಸ್ಥೆಯನ್ನು ಮಾಡಿದ್ದೇವೆ ಎಂದು ತಿಳಿಸಿದರು.

ಮೈಸೂರು ನಗರದ ಮೇಯರ್ ರವರು ಮಾತನಾಡುತ್ತಾ ಈ ಸೌಲಭ್ಯವು ಸಾರ್ವಜನಿಕರಿಗೆ ಯಾವುದೇ ರೀತಿಯ ಅನುಕೂಲವಿಲ್ಲ ಕೇವಲ ವ್ಯವಹಾರಿಕ ಕಾಂಪ್ಲೆಕ್ಸ್ ಆಗಿದೆ ಎಂದು ದೂರಿದರು.
ಬಸ್ಸ್ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಆಟೋರಿಕ್ಷಾ ಗಳ ಸೌಲಭ್ಯ ದೊರಕಿಸಿಕೊಡುವಂತೆ ತಿಳಿಸಿದರು.

## III ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಾಮಗಾರಿಗಳು:

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ರೂ. 290.02 ಯೋಜನಾ ಮೊತ್ತದೊಂದಿಗೆ ಹೊರ ವರ್ತುಲ ರಸ್ತೆಯನ್ನು 6 ಪತಗಳಿಗೆ ವಿಸ್ತರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 4 ಪ್ಯಾಕೇಜ್‌ಗಳಲ್ಲಿ ವಹಿಸಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಅಭಿಯಂತರರು ತಿಳಿಸಿದರು. ಪ್ಯಾಕೇಜ್ 2 ಮತ್ತು 4 ಜೂನ್ ಮಾಹೆಯಲ್ಲಿ ಪೂರ್ಣಗೊಳ್ಳುವುದಾಗಿ ಹಾಗೂ 1 ಮತ್ತು 3 ಪ್ಯಾಕೇಜ್‌ಗಳಲ್ಲಿ ಅಂಡರ್ ಗ್ರೌಂಡ್ ತೊಂದರೆ ಇರುವುದರಿಂದ ಈ ಕೆಲಸವು ನವೆಂಬರ್ ಮಾಹೆಯಲ್ಲಿ ಪೂರ್ಣಗೊಳ್ಳುವುದು ಎಂದು ತಿಳಿಸಿದರು.

ಮೈಸೂರು ನಗರದ ಮೇಯರ್ ರವರು ಮಾತನಾಡುತ್ತಾ ಒಳ್ಳೆ ಗುಣಮಟ್ಟದ ರೀತಿಯಲ್ಲಿ 2004–05 ರಲ್ಲಿ ಕೆಆರ್‌ಎಸ್ ಹಾಗೂ ಹೆಬ್ಬಾಳ್ ರಸ್ತೆಯಲ್ಲಿ ರಿಂಗ್ ರೋಡ್ ಅನ್ನು ನಿರ್ಮಿಸಿಲ್ಲದ ಕಾರಣ ಅದು ಈಗ ಕುಸಿದು ಹೋಗಿದೆ ಎಂದು ದೂರಿದರು. ರಸ್ತೆಯ ಬದಿ ವಿದ್ಯುತ್ ಕಂಬಗಳನ್ನು 30 ಮೀಟರ್ ಅಂತರದಲ್ಲಿ ಹಾಕುತ್ತಿರುವುದರಿಂದ ಮುಂದೆ ಮೈಸೂರಿನಲ್ಲಿ ವಿದ್ಯುತ್ ಅಭಾವವಾಗುವ ಸಂಭವವಿದೆ ಮತ್ತು ಅದನ್ನು ಮೇನ್‌ಟೆನ್ ಮಾಡಲು ಸಹ ತೊಂದರೆ ಆಗುತ್ತದೆ ಎಂದು ದೂರಿದರು.

ಇದಕ್ಕೆ ಮ್ಯಾನೇಜಿಂಗ್ ಡೈರೆಕ್ಟರ್, ಕೆಯುಐಡಿಎಫ್‌ಸಿ ಯವರು ರಸ್ತೆಯ ಬದಿಯಲ್ಲಿ ವಿದ್ಯುತ್ ಕಂಬಗಳ ಅವಶ್ಯಕತೆ ಇರುವ ಕಡೆಗಳಲ್ಲಿ ಮಾತ್ರ ಹಾಕಲು ಮತ್ತು ಅದರ ಅಂತರವನ್ನು ಹೆಚ್ಚು ಮಾಡಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಹಾಗೂ ವಿದ್ಯುತ್ ಬಿಲ್ಲಿನ ವೆಚ್ಚವನ್ನು ಕಡಿಮೆಗೊಳಿಸಬಹುದು ಎಂದು ತಿಳಿಸಿದರು.

## IV <u>ಮೈಸೂರು ಮಹಾನಗರ ಪಾಲಿಕೆ ಕಾಮಗಾರಿಗಳು</u> :–

**1. <u>ದೊಡ್ಡ ಮಳೆ ನೀರು ಚರಂಡಿ:</u>**

ಮೈಸೂರು ನಗರದಲ್ಲಿ ದೊಡ್ಡ ಮಳೆ ನೀರು ಚರಂಡಿ ಪುನರ್ ನಿರ್ಮಾಣ ಕಾಮಗಾರಿಗಳನ್ನು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೈಗೆತ್ತಿಕೊಳ್ಳಲಾಗಿರುತ್ತದೆ. ರೂ. 125 ಕೋಟಿಗಳಿಗೆ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ 5 ಪ್ಯಾಕೇಜ್ ನಲ್ಲಿ 2009 ಪ್ರಾರಂಭಿಸಲಾಯಿತು. 5 ಪ್ಯಾಕೇಜ್ ನಲ್ಲಿ ಇನ್ನು 1 ತಿಂಗಳಿನಲ್ಲಿ 2 ಪ್ಯಾಕೇಜ್ ಕೆಲಸವು ಪೂರ್ಣಗೊಳ್ಳಲಿದೆ ಹಾಗೂ ಉಳಿದ 3 ಪ್ಯಾಕೇಜ್ ಕಾಮಗಾರಿಗಳು ನವೆಂಬರ್ ಮಾಹೆಯಲ್ಲಿ ಪೂರ್ಣಗೊಳ್ಳುವುದು ಎಂದು ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು.

ಏಪ್ರಿಲ್ 2010 ರಿಂದ ಭಾರತ ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲವೆಂದು ಮತ್ತು ಗುತ್ತಿಗೆದಾರರುಗಳಿಗೆ ಬಾಕಿ ಬಿಲ್ಲುಗಳು ಪಾವತಿಯಾಗ ಬೇಕಾಗಿರುತ್ತದೆ ಎಂದು ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು. ಬಾಕಿ ಬಿಲ್ಲುಗಳನ್ನು ಪಾವತಿಸಿಲ್ಲದಿರುವುದ್ದರಿಂದ ಎಲ್ಲಾ ಗುತ್ತಿಗೆ ದಾರರುಗಳು ನವೆಂಬರ್ ಮಾಹೆಯಿಂದ ಕಾಮಗಾರಿಗಳ ಪ್ರಗತಿಯನ್ನು ಕಡಿಮೆಗೊಳಿಸಿರುವುದಾಗಿ ತಿಳಿಸಿದರು. 6 ವ್ಯಾಲಿಯನ್ನು ಡಿಪಿಆರ್ ಮಾಡಿದ್ದೇವು ಹಣದ ತೊಂದರೆಯಿರುವುದರಿಂದ

ಬನ್ನಿಮಂಟಪ ಹಾಗೂ ಹೆಬ್ಬಾಳ ಕೆರೆ ಈ 2 ವ್ಯಾಲಿಯನ್ನು ಕೈಗೆತ್ತಿಕೊಂಡಿದ್ದೇವೆ ಎಂದು ಅಧೀಕ್ಷಕ ಅಭಿಯಂತರರು ತಿಳಿಸಿದರು.

2. <u>ಘನತ್ಯಾಜ್ಯ ವಸ್ತು ನಿರ್ವಹಣೆ:</u>

ಒಟ್ಟು 134 ಆಟೋಟಿಪ್ಪರ್‌ಗಳಿವೆ. ಆಟೋಟಿಪ್ಪರ್‌ಗಳನ್ನು ಗುತ್ತಿಗೆದಾರರು ನಿರ್ವಹಿಸುತ್ತಿದ್ದಾರೆ. ಒಂದು ಆಟೋಟಿಪ್ಪರ್ 7 ವರ್ಷಗಳ ಕಾಲ ಬಾಳಿಕೆ ಬರುತ್ತವೆ. ಈ ಗುತ್ತಿಗೆದಾರರು 3 ವರ್ಷದ ಒಪ್ಪಂದದ ಮೇರೆಗೆ ಕೆಲಸ ನಿರ್ವಹಿಸುತ್ತಿದ್ದಾರೆ. 3 ವರ್ಷದ ನಂತರ ಈ ಆಟೋಟಿಪ್ಪರ್ ಗಳನ್ನು ಬೇರೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗುವುದು ಎಂದು ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು.

ಮೈಸೂರು ನಗರದ ಮೇಯರ್ ರವರು ಮಾತನಾಡುತ್ತಾ ಈ ನೆಲಭರ್ತಿ ಹಾಗೂ ಕ್ಯಾಪಿಂಗ್ ಕಾಮಗಾರಿಯ ಬಗ್ಗೆ ಕೌನ್ಸಿಲ್ ಸಭೆಯಲ್ಲಿ ಯಾವುದೇ ಮಾಹಿತಿಯನ್ನು ನೀಡುತ್ತಿಲ್ಲ ಎಂದು ತಿಳಿಸಿದರು.

**3. <u>ಹೇರಿಟೇಜ್ ಕೋರ್ :</u>**

16 ಕೋಟಿ ಯೋಜನಾ ಮೊತ್ತದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ. ಈ ಕೆಲಸವನ್ನು 4 ಪ್ಯಾಕೇಜ್‌ಗಳಾಗಿ ವಿಂಗಡಿಸಿದ್ದು, 2 ಪ್ಯಾಕೇಜ್‌ಗಳಿಗೆ ಅನುಮೋದನೆ ದೊರಕಿದೆ. ಒಂದು ಪ್ಯಾಕೇಜ್ ಅರಮನೆಯ ಸುತ್ತಾ ಅಂದರೆ ರಾಜಮಾರ್ಗದಲ್ಲಿ ಟೌನ್ ಹಾಲ್ ಎದುರುಗಡೆ ಮಾಡಲು ನಿರ್ಧರಿಸಿದ್ದೇವೆ ಇದರಲ್ಲಿ 5% ಮತ್ತು 6% ಪ್ರವಾಸೋದ್ಯಮ ಇಲಾಖೆಯು ವಹಿಸಿಕೊಂಡಿದೆ ಎಂದು ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು.

**4. <u>ಇಡಬ್ಲ್ಯೂಎಸ್ ಮನೆಗಳು ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ :</u>**

ಇದು ಮೈನಪಾ ಪ್ರಾಜೆಕ್ಟ್ ಆಗಿದೆ. 3 ತಿಂಗಳಿನಲ್ಲಿ ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಅವರ ಜೊತೆ ಒಪ್ಪಂದವು ಮುಗಿದಿದೆ. ಬಿಎಸ್‌ಯುಪಿ ಮನೆಗಳನ್ನು 4 ಕಂತುಗಳನ್ನಾಗಿ ಮಾಡಿಕೊಂಡಿದ್ದೇವೆ. ಮೊದಲನೆ ಕಂತನ್ನು ರೂ. 10,000/- ಫಲಾನುಭವಿಗಳಿಂದ ಪಡೆದು ಕಾಮಗಾರಿಯನ್ನು ಪ್ರಾರಂಭಿಸಿದ್ದೇವೆ ಹಾಗೂ ಅವರಿಗೆ ಪ್ರತ್ಯೇಕವಾದ ಅಡುಗೆ ಮನೆ, ಒಂದು ಕೊಠಡಿ, ಶೌಚಾಲಯವನ್ನು ನಿರ್ಮಿಸಿ ಕೊಡುತ್ತಿದ್ದೇವೆ ಎಂದು ಅಧೀಕ್ಷಕ ಇಂಜಿನಿಯರ್ ರವರು ತಿಳಿಸಿದರು.

## V **<u>ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾಮಗಾರಿಗಳು</u>** :-

DUs ಯಿಂದ ಅನುಮೋದನೆಯಾದ ಮೊತ್ತ ರೂ. 2,500/- ಕೋಟಿ. ಒಟ್ಟು ಯೋಜನೆಯ ಮೊತ್ತ ರೂ. 90.93 ಕೋಟಿಗಳು, ಬಿಡುಗಡೆಯಾಗಿರುವ ಮೊತ್ತ ರೂ. 38.70 ಹಾಗೂ ವೆಚ್ಚವಾಗಿರುವ ಮೊತ್ತ ರೂ. 42.16 ಕೋಟಿಗಳಾಗಿವೆ. 3 ನೇ ಕಂತಿನಲ್ಲಿ ಬಿಡುಗಡೆಯಾಗಲಿರುವ ಮೊತ್ತ ರೂ. 16.35 ಕೋಟಿಗಳು. ಮೊದಲನೆ ಹಂತದಲ್ಲಿ 20 ಸ್ಲಂ ಗಳಿಗೆ 2,788 ಮನೆಗಳನ್ನು ನಿರ್ಮಿಸುತ್ತಿದ್ದೇವೆ. ಅದರಲ್ಲಿ 2,128 ಮನೆಗಳು ಪೂರ್ಣಗೊಂಡಿದೆ ಹಾಗೂ

424 ಮನೆಗಳ ಕಾಮಗಾರಿಯ ಕೆಲಸವು ಪ್ರಗತಿಯಲ್ಲಿದೆ. ಹಣದ ತೊಂದರೆಯಿಂದ ನೀರಿನ ವ್ಯವಸ್ಥೆ, ವಿದ್ಯುತ್ ಹಾಗೂ ಚರಂಡಿ ವ್ಯವಸ್ಥೆಯ ಕೆಲಸವು ನಡೆಯಬೇಕಿದೆ ಎಂದು ತಿಳಿಸಿದರು. ಪ್ರಸ್ತಾವನೆ ಇದ್ದರೆ ಹಣದ ವ್ಯವಸ್ಥೆಯಾಗುತ್ತದೆ ಹಾಗೂ ಉಳಿದಿರುವ ಹಣದಿಂದ ಎಷ್ಟು ಮನೆಗಳಿಗೆ ಮೇಲಿನ ಸೌಕರ್ಯವಾಗುತ್ತದೆಯೋ ಅಷ್ಟು ಮನೆಯನ್ನಾದರೂ ಪೂರ್ಣಗೊಳಿಸಲು ಮ್ಯಾನೇಜಿಂಗ್ ಡೈರೆಕ್ಟರ್, ಕೆಯುಐಡಿಎಫ್‌ಸಿ ರವರು ಸಲಹೆ ನೀಡಿದರು.

ಡಿಪಿಟಿ ಮಾದರಿಯ ಮನೆಗಳಲ್ಲಿ 2,840 ಪೂರ್ಣಗೊಳ್ಳಲಿದೆ ಅದರಲ್ಲಿ 1,000 ಮನೆಗಳು ಪೂರ್ಣಗೊಂಡಿದೆ, 280 ಮನೆಗಳಿಗೆ ರೂಫ್ ಕಾಮಗಾರಿಯು ಪ್ರಗತಿಯಲ್ಲಿದೆ. ಒಂದು ದಿನಕ್ಕೆ ಒಂದು ಮನೆಯು ಪೂರ್ಣವಾಗುತ್ತದೆ ಎಂದು ತಿಳಿಸಿದರು.

ಹಾಗೆಯೇ ಕೊನೆಯಲ್ಲಿ ಯಾವುದಾದರೂ ವಿಷಯವಿದ್ದರೆ ಚರ್ಚಿಸಬಹುದು ಎಂದು ಮ್ಯಾನೇಜಿಂಗ್ ಡೈರೆಕ್ಟರ್, ಕೆಯುಐಡಿಎಫ್‌ಸಿರವರು ಕೇಳಿದರು ನಂತರ ಯಾವುದೇ ವಿಷಯವಿದ್ದರೂ ಅದು ಪಾರದರ್ಶಕದ ರೀತಿಯಲ್ಲಿ ಕೌನ್ಸಿಲ್ ಸಭೆಯಲ್ಲಿ ಚರ್ಚೆಯಾಗಲಿ ಎಂದು ತಿಳಿಸಿದರು.

ಮಾನ್ಯ ಆಯುಕ್ತರು, ಮೈನಪಾ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ,
ಹಾಗೂ ವಿಶೇಷಾಧಿಕಾರಿಗಳು ಜೆಎನ್‌ನರ್ಮ್,
ಮೈಸೂರು.